## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 69 (763) |
| ಸದಸ್ಯರ ಹೆಸರು | : | ಶ್ರೀ ಟಿ. ಎನ್. ಜವರಾಯಿ ಗೌಡ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 21.08.2026 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಕಾವೇರಿ ಮತ್ತು ಅರ್ಕಾವತಿ ನದಿ ಸಂಗಮದಿಂದ ಮುಂದಕ್ಕೆ 2 ಕಿ.ಮೀ ದೂರದಲ್ಲಿ ಮೇಕೆದಾಟು ಅಣೆಕಟ್ಟು ನಿರ್ಮಾಣ ಮಾಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ ಹಾಗೂ ನಡೆಯುತ್ತಿರುವ ಪ್ರಕ್ರಿಯೆಗಳ ಬಗ್ಗೆ ವಿವರ ಒದಗಿಸುವುದು; | ಮೇಕೆದಾಟು ಸಮತೋಲನಾ ಜಲಾಶಯ ಮತ್ತು ಕುಡಿಯುವ ನೀರಿನ ಯೋಜನೆಯ ಪರಿಷ್ಕೃತ ಯೋಜನಾ ವರದಿಗೆ ಕೇಂದ್ರ ಜಲ ಆಯೋಗ (Central Water Commisssion- CWC) ದಿಂದ ತೀರುವಳಿ ಪಡೆಯಲು ಕ್ರಮವಹಿಸಲಾಗುತ್ತಿದೆ.<br>ಮೇಕೆದಾಟು ಸಮತೋಲನ ಜಲಾಶಯ ಮತ್ತು ಕುಡಿಯುವ ನೀರಿನ ಯೋಜನೆಯ PFR (Pre-Feasibility Report) ಅನ್ನು CWCಗೆ ಆಗಸ್ಟ್-2018ರಲ್ಲಿ ಸಲ್ಲಿಸಲಾಗಿದ್ದು, ದಿನಾಂಕ:22.11.2018 ರಂದು DPR ತಯಾರಿಸಲು ತಾತ್ವಿಕ ಅನುಮೋದನೆ ನೀಡಿರುತ್ತದೆ. ಅದರಂತೆ ದಿನಾಂಕ:18.01.2019 ರಂದು ಯೋಜನೆಯ ರೂ.9,000.00 ಕೋಟಿ (2018-19ನೇ ಸಾಲಿನ ದರಪಟ್ಟಿ) ಮೊತ್ತದ DPR ಸಲ್ಲಿಸಲಾಗಿರುತ್ತದೆ.<br>ಸದರಿ DPR ಪರಿಶೀಲನೆಯ ಬಳಿಕ CWCಯ ವಿವಿಧ ನಿರ್ದೇಶನಾಲಯಗಳ Observations ಗಳನ್ನು ದಿನಾಂಕ:03.01.2026 ರಂದು ನೀಡಲಾಗಿದ್ದು, ಅವುಗಳಿಗೆ ಪೂರಕ ದಾಖಲೆಗಳು ಹಾಗೂ ಅನುಪಾಲನಾ ವರದಿಯನ್ನು ದಿನಾಂಕ:21.04.2026ರಂದು e-Project Appraisal Monitoring System (e-PAMS) ಪೋರ್ಟಲ್‌ನಲ್ಲಿ ಸಲ್ಲಿಸಲಾಗಿರುತ್ತದೆ. ನಂತರ ಹೆಚ್ಚುವರಿ Observations ಗಳೊಂದಿಗೆ ಹಾಗೂ Cauvery Water Dispute Tribunal (CWDT) ಮತ್ತು 2017ರ CWC Guidelines ಅನ್ವಯ ಪರಿಷ್ಕೃತ DPR ಸಲ್ಲಿಸುವಂತೆ ತಿಳಿಸಿ 2019 ರಲ್ಲಿ ಸಲ್ಲಿಸಿದ್ದ DPR ಅನ್ನು ದಿನಾಂಕ:29.06.2026 ರಂದು ಹಿಂತಿರುಗಿಸಲಾಗಿರುತ್ತದೆ.<br>ಅದರಂತೆ, *CWC Guidelines for Submission, Appraisal & Acceptance of Irrigation and Multipurpose Projects, 2017* ರನ್ವಯ ಹಾಗೂ CWCಯಲ್ಲಿ DPR ತಯಾರಿಕೆಗೆ ನಿಗದಿಪಡಿಸಿರುವ ಎಲ್ಲಾ ಮಾನದಂಡಗಳನ್ನು ಅಳವಡಿಸಿಕೊಂಡು, ಕೋರಲಾದ ಹೆಚ್ಚುವರಿ Observations ಗಳಿಗೆ ಸಂಬಂಧಿಸಿದಂತೆ ವಿವರವಾದ ಅನುಪಾಲನಾ ವರದಿ ಹಾಗೂ ಅಗತ್ಯ ಪೂರಕ ದಾಖಲೆಗಳು ಅಲ್ಲದೆ Latest Cost Estimate (LCE) ಯನ್ನೂ ಒಳಗೊಂಡಿರುವ ಪರಿಷ್ಕೃತ DPR ಅನ್ನು ದಿನಾಂಕ:13.08.2026ರಂದು e-PAMS ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡಲಾಗಿರುತ್ತದೆ. |

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>(ಆ)</td><td>ಈ ಅಣೆಕಟ್ಟು ನಿರ್ಮಾಣದಿಂದ ಲಭ್ಯವಾಗುವ ನೀರಿನ ಸಾಮರ್ಥ್ಯ ಎಷ್ಟು; ಈ ನೀರನ್ನು ಯಾವ ಯಾವ ನಗರಗಳಿಗೆ ಬಳಸಿಕೊಳ್ಳಲಾಗುವುದು;</td><td>ಮೇಕೆದಾಟು ಅಣೆಕಟ್ಟು ನಿರ್ಮಾಣದಿಂದ ಲಭ್ಯವಾಗುವ ನೀರಿನ ಸಾಮರ್ಥ್ಯ 67.16 TMC ಆಗಿದ್ದು, ಪರಿಷ್ಕೃತ ಯೋಜನಾ ವರದಿಯಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಕುಡಿಯುವ ಉದ್ದೇಶಕ್ಕಾಗಿ ನೀರನ್ನು ಒದಗಿಸಲು ಉದ್ದೇಶಿಸಲಾಗಿದೆ.</td></tr>
<tr><td>(ಇ)</td><td>ಈ ಅಣೆಕಟ್ಟು ಕಟ್ಟುವುದರಿಂದ ಸರ್ಕಾರಿ ಮತ್ತು ಖಾಸಗಿಯಾಗಿ ಮುಳುಗಡೆಯಾಗುತ್ತಿರುವ ಜಮೀನಿನ ಪ್ರಮಾಣವೆಷ್ಟು; ಈಗಾಗಲೇ ಭೂಸ್ವಾಧೀನದ ಪ್ರಕ್ರಿಯೆ ಮುಗಿದಿದೆಯೇ; (ವಿವರ ನೀಡುವುದು)</td><td>ಈ ಯೋಜನೆ ಅಡಿಯಲ್ಲಿ ಮುಳುಗಡೆಗೊಳಪಡುವ ಪ್ರದೇಶದ ಅಂದಾಜು ವಿವರಗಳು ಈ ಕೆಳಗಿನಂತಿದೆ:<br>
<table>
<tr><td>(ಅ) ಸರ್ಕಾರಿ ಜಮೀನು:</td><td></td></tr>
<tr><td>(i) ಕಾವೇರಿ ವನ್ಯಜೀವಿ ವಿಭಾಗ</td><td>4879.02 ಹೆಕ್ಟೇರ್</td></tr>
<tr><td>(ii) ಮೀಸಲು ಅರಣ್ಯ ಪ್ರದೇಶ</td><td>198.31 ಹೆಕ್ಟೇರ್</td></tr>
<tr><td>ಒಟ್ಟು-(ಅ):</td><td>5077.33 ಹೆಕ್ಟೇರ್</td></tr>
<tr><td>(ಆ) ಖಾಸಗಿ ಜಮೀನು:</td><td>190.26 ಹೆಕ್ಟೇರ್</td></tr>
<tr><td>ಒಟ್ಟು (ಅ) + (ಆ):</td><td>5267.59 ಹೆಕ್ಟೇರ್</td></tr>
</table>
<br>ಸದರಿ ಯೋಜನೆಗೆ ಅವಶ್ಯವಿರುವ ಅರಣ್ಯ ಭೂಮಿಗೆ ಬದಲಾಗಿ 19,176 ಹೆಕ್ಟೇರ್ ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವ Compensatory Afforestation Land ಅನ್ನು ಪ್ರಾಥಮಿಕವಾಗಿ ಗುರುತಿಸಲಾಗಿದೆ. ಅಲ್ಲದೆ, ಅರಣ್ಯ ಇಲಾಖೆ ವತಿಯಿಂದ ಮುಳುಗಡೆಗೊಳಪಡುವ ಮರಗಳ ಗಣತಿ ಕಾರ್ಯ ಪ್ರಗತಿಯಲ್ಲಿದೆ.<br>ಮುಳುಗಡೆಗೊಳಪಡುವ ಖಾಸಗಿ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ಇನ್ನೂ ಪ್ರಾರಂಭಿಸಿರುವುದಿಲ್ಲ.</td></tr>
<tr><td>(ಈ)</td><td>ಈ ಯೋಜನೆಗೆ ಖರ್ಚಾಗುವ ಒಟ್ಟು ಮೊತ್ತವೆಷ್ಟು; ಇಲ್ಲಿನ ತನಕ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ? (ಮಾಹಿತಿ ಒದಗಿಸುವುದು)</td><td>ಪರಿಷ್ಕೃತ DPR ರನ್ವಯ ಮೇಕೆದಾಟು ಯೋಜನೆಯ ಅಂದಾಜು ಮೊತ್ತ ರೂ.16,745.00 ಕೋಟಿ (2026-27ನೇ ಸಾಲಿನ ದರಪಟ್ಟಿ) ಆಗಿರುತ್ತದೆ.<br><br>ಯೋಜನೆಗೆ ಕೇಂದ್ರ ಸರ್ಕಾರದ ಸಕ್ಷಮ ಪ್ರಾಧಿಕಾರಗಳ ಶಾಸನಬದ್ಧ ತೀರುವಳಿ ಪಡೆದು ಆದ್ಯತೆಯ ಮೇರೆಗೆ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು.</td></tr>
</table>

**ಸಂ : ಜಸಂಇ 64 ಎನ್‌ಎಲ್‌ಎ 2026**

**(ಎನ್. ಚಲುವರಾಯಸ್ವಾಮಿ)**
**ಜಲಸಂಪನ್ಮೂಲ ಸಚಿವರು**